Regd No M 1299 34 th Year ತಾ॥ 19—2—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಆದಾರಾತ್ಮಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆಚೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೇದಾರ್ ಎಂ. ಎ ಸುಬ್ರಾಯರು | ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ತಿಂಗಳಿಗೊಂದಾವರ್ತಿ]
ವಾರ್ಷಿಕಚಂದಾ ಅಂಚೆಚೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಮಾತಿನ ವರಸೆ

ಮಾತಿಗೆ ಹೇಳತ್ತೇನೆ. ಕೇಳಿ. ಚೈನಾ ಪ್ರಜೆಗಳನ್ನೆಲ್ಲರನ್ನೂ ಸಾಲಿಗೆ 4 ಮಂದಿಯಂತೆ ಸಾಲು ಸಾಲಾಗಿ ನಿಲ್ಲಿಸಿ, ಮೊದಲು ನುಂದಿರುವ 4 ಮಂದಿಯನ್ನು ಅ ಶರುವಾಯ ಅವರ ಹಿಂದಿನಿಂದ 4 ಮಂದಿ ಯನ್ನು ಈ ರೀತಿ ನಂಸೆಯಾಗಿ ಸುಟ್ಟುಹಾಕಿದವೆನ್ನೋಣ. ಈ ಬಗೆಯಲ್ಲಿ ನಿಮಿಷಕ್ಕೆ ಸುಮಾರು ಇಪ್ಪತ್ತೈ ಮಂದಿಯನ್ನು ಕೊಲ್ಲಬಹುದು. ಅಂದರೆ ಗಂಟೆಗೆ ಸಾವಿರದಿನ್ನೂರು ವಂದಿ. ದಿನಕ್ಕೆ 28800 ನುಂದಿ, ವರ್ಷಕ್ಕೆ 10512000 ಮಂದಿ ಹತ್ತು ವರ್ಷಗಳಿಗೆ 105120000 ಮಂದಿ ಆಗುತ್ತಾರೆ. ಈ ಬಗೆಯಲ್ಲಿ ಚೀನಾದಲ್ಲಿಯ 45 ಕೋಟಿ ಮಂದಿಯನ್ನು ಸಾಯಿಸಲು 43 ವರ್ಷಗಳಾಗುತ್ತದೆ. ಇಷ್ಟರೊಳಗೆ ಇನ್ನೊಂದು ತಲೆಯವರು ಜನ್ಮಿಸುತ್ತಾರೆ. ಚೈನಾದವರನ್ನು ಸಾಯಿಸುವುದು ಎಂದಿಗೂ ಪೂರ್ತಿಯಾಗದು. (ಸೈಲ್ಡ್ ಎರ್ ಎಂಬ ಸ್ವಿಸ್ ಪತ್ರಿಕೆಯ ಸಂವಾದಕೀಯ)

ಹುಚ್ಚರ ಹುಚ್ಚಾಟ

ಗುಂಟೂರಿನಲ್ಲಿ ಒಬ್ಬ ಕಾಂಗ್ರೆಸ್‌ವಾದಿಯು ವ್ಯಾಯೋಪವೇಶ ಮಾಡುತ್ತಿದ್ದಾನೆ, ಕಾರಣವೇನೆನ್ನುವಿರಾ ? 43 ರ ಕಾಂಗ್ರೆಸ್ ಚಳುವಳಿಯಲ್ಲಿ ವ್ಯಯ ಮಾಡಿದ ಧನವನ್ನು ಅದರ ಸ್ವಂತದಾರಿಗೆ ತಲುಪಿಸಬೇಕೆಂಬುದು ಅವರ ವಾದ. ಇತರ ಕಾಂಗ್ರೆಸಿಗರು ಇದನ್ನು ಒಪ್ಪಲಿಲ್ಲವೆಂದು ಕಾಣುತ್ತದೆ. ಅವರನ್ನೂ ಒಪ್ಪುವಂತೆ ಮಾಡಲು ಈ ವ್ಯಾಯೋಪವೇಶ. ಅವರು ಖರ್ಚು ಮಾಡಿರುವ ಹಣ 1600 ರೂ. ಗಳಂತೆ ಅಲ್ಲಿಯ ಜನರಲ್ಲಿ ಮುಖ್ಯಸ್ಥರು ಚಂದಾರಾಗಳನ್ನೆತ್ತಿ ಈ ಹಣವನ್ನು ಅವರಿಗೆ ಕೊಡಿಸುವ ಏರ್ಪಾಡು ಮಾಡಹತ್ತಿರುವರಂತೆ. ಈ ಬಗೆಯಲ್ಲಿ ಮೊಂಡುತನದಿಂದ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಲು ಯತ್ನಿಸುವುದೂ ಒಂದು ಹುಚ್ಚು. ಘೋರವಾದ ಒಂಟು ಸ್ವಭಾವದವಸಕಲಸವು ಈ ಬಗೆಯದು ಇದು ನಿಜವಾಗಿಯು ಕಾಂಗ್ರೆಸುವಾದಿಯ ಲಕ್ಷಣವಾಗಿರಕೂಡದು

ಏಷ್ಯದಲ್ಲಿ ರಷಿಯದ ಅಣು ಕೇಂದ್ರ

ದಿವ್ಯ ವಾಣಿ

ಗುಣಹೀನ ಹಣವಂತನ ಸ್ನೇಹಕ್ಕಿಂತಲೂ ಗುಣಯುತ ದರಿದ್ರನ ಸ್ನೇಹದಿಂದಲೇ ವಿಶೇಷ ಲಾಭವಿದೆ.

— ಅನುಭವಾಮೃತ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ವಾಣಿವಿಲಾಸಪುರದಲ್ಲಿ ಈ ಬೆಳಿಗ್ಗೆ ಶ್ರೀ ಎ. ಶಂಕರಶೆಟ್ಟಿ ಶಂಬೈಂಡ್ ಆಸ್ಪತ್ರೆಯನ್ನು ಶಿಲಾನ್ಯಾಸ ಸಮಾರಂಭವನ್ನು ನೆರವೇರಿಸಿದರು.

ಭಾರತದಲ್ಲಿ 129 ಕ್ಷಯಾಸ್ಪತ್ರೆಗಳಿದ್ದು. ಅವೆಲ್ಲ ಸಟ್ಟಣಗಳಲ್ಲವೆ

ಸೇಲಂ ಕಲೆಕ್ಟರರ ಕಚೇರಿ ಮುಂದೆ ಮೊನೆ ತೊಂಬತ್ತೂರು ನೇಕಾರರು ಪಿಕೆಟಿಂಗ್ ಮಾಡಿದರು

ಸಾಕಿಸ್ತಾನದಲ್ಲಿ ಜನಿಸುವ ಮಕ್ಕಳಿಗೆ ಷೇಕ್ ಅಬ್ದುಲ್ಲ ಎಂದು ನಾಮಕರಣ ಮಾಡಕೂಡದು

ಕ್ರೀಟಿನ ಕ್ಯಾನಿಯಾದಲ್ಲಿ ಕಾರ್ಕ್ ಸ್ಟ್ರನೆಂಬವನು ತನ್ನ ಪ್ರೇಯಸಿಯನ್ನು ಸಾಗಿಸಿಕೊಂಡು ಪರ್ವತ ಸ್ಪದೇಶವನ್ನು ಹೊಕ್ಕು ತನ್ನ ರಕ್ಷಣೆಗಾಗಿ ಒಂದು ಶಸ್ತ್ರಸಜ್ಜಿತ ಗುಂಪನ್ನೇ ಸೃಷ್ಟಿಸಿ ಹಿಡಿಯಲು ಬಂದ ನೇಲೆ ಯುದ್ಧವೊಡ್ಡಿ ಕಡೆಗೆ ಸಿಕ್ಕಿಬಿದ್ದ. ಇವನಿಗೆ 2 ವರ್ಷ ಸಜೆ ವಿಧಿಸಲಾಯಿತು. ಇವನೆನ್ನ ಹಿಡಿಯಲು ಅರ್ಧ ಲಕ್ಷ ಪೌಂಡು ಖರ್ಚಾಯಿತು

ಭಾರತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೀರಾಲಾಲ್ ಕನಿಯ ಬೆಂಗಳೂರಿನಲ್ಲಿ ನಾಳೆಯಿಂದ ಇರುವರು.

ಸಾದಿ ಅರೇಬಿಯ ದೊರೆಗಳು ಸ್ವತಃ ವೆಚ್ಚದಿಂದ ಮಹಮದ್ ಪೈಗಂಬರರ ವೆಂದಿನ ಗೋರಿಯನ್ನು ರಿಪೇರಿ ಮಾಡಿಸುವದಾಗಿ ಕೈರೋ ವಾರ್ತೆ.

ಮಧ್ಯ ವಿಶ್ವದಲ್ಲಿ ರಷ್ಯ ಅನೇಕ ಅಣುಸಂಸ್ಥೆಗಳನ್ನ ಹೊಂದಿರುವುದಾಗಿ ರಾಷ್ಟ್ರೀಯ ಭೌಗೋಲಿಕ ಸಂಘ ತಿಳಿಸಿರುವುದಾಗಿ ವಾಷಿಂಗ್ಟನ್ ವಾರ್ತೆ

ಬೆಳಗಾವಿ ಪೌರಸಭೆಯವರು ಗಣತಿದಾರರನ್ನು ನಿಯಮಿಸುವಲ್ಲಿ ಕೇವಲ ನುಡಿಗಟ್ಟು ಒಬ್ಬ ಗಣತಿದಾರನ ನಿಯಮಿಸಿ ಕನ್ನಡಕ್ಕೆ ಅನ್ಯಾಯ ಮಾಡಿರುವರು.

ಶ್ರೀ ಸಿದ್ಧಲಿಂಗಯ್ಯನವರ ರಾಜೀನಾಮೆಯಿಂದ ಮಂತ್ರಿ ಸ್ಥಾನ ಖಾಲಿ ಏನೂ ಇಲ್ಲವೆಂದೂ, ಮಂತ್ರಿಮಂಡಲದಲ್ಲಿ ಇಷ್ಟೇ ಎಂದು ಇರಬೇಕೆಂಬ ನಿಯಮವೇನೂ ಇಲ್ಲವೆಂದೂ ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಬೆಂಗಳೂರಿನಲ್ಲಿ ಪತ್ರಿಕಾ ಸಂವೇಳನದಲ್ಲಿ ತಿಳಿಸಿರುವರು

ಬೊಂಬಾಯಿಸಲ್ಲಿ ಪ್ರಕಟವಾಗುವ ಆದರ್ಶ ಸುವಾದಕ ಚಿ॥ ರಾ॥ ಜಿ. ವಿ ರಂಗಸ್ವಾಮಿ ಮತ್ತು ಶ್ರೀ ಬಿ. ಎಸ್. ಗುಂಡೂರಾಯರ ಸಹೋದರಿ ಚಿ॥ ಸೌ॥ ಶಾಂತ ಇವರ ವಿವಾಹ ಇಂದೇ. ತಾ॥ 16 ರಲ್ಲಿ ಅಭಿನಂದನ ತಾಲ್ಲೂಕು ಬೃಹತ್ಸಾರ್ವಜನಿಕ ಸಭೆಯಿತು

ನೇಪಾಳದಲ್ಲಿ ಪ್ರಜಾಪ್ರಭುತ್ವ ಮಂತ್ರಿಮಂಡಲ ಪ್ರಾರಂಭವಾಯಿತು 52 ಕ್ಕೆ ಮುಂಚೆ ಘಟನಾ ಸಮಿತಿ ಕೂಡಬೇಕೆಂದು ದೊರೆಗಳು ತಿಳಿಸಿದ್ದಾರೆ.

ರಾಷ್ಟ್ರಾಧ್ಯಕ್ಷ ರಾಜೇಂದ್ರ ಬಾಬುಗಳು ಸಂಸ್ಥಾನಕ್ಕೆ ಏಪ್ರಿಲ್ ಮೊದಲಕೆ ವಾರ ಬಂದು ಬೆಂಗಳೂರಿನಲ್ಲಿ 2 ದಿವಸ ಮೈಸೂರಿನಲ್ಲಿ 1 ದಿವಸ ಇರುವರು ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟರೇಟ ಪ್ರದಾನ ಕೊಡುವದು.

ಭಾರತ ಸರ್ಕಾರದ ಉಪಸಚಿವರಾಗಿದ್ದ ಶ್ರೀ ಕೃಷ್ಣದಾಲಾಲರು ದಿಲ್ಲಿಯಲ್ಲಿ ನಿನ್ನೆ ಹೃದ್ರೋಗದಿಂದ ನಿಧನರಾದರು.

ಉಡ್‌ಲಾಂಡ್
ಶಿ ನ
16—2—51 ರಿಂದ
ಬಾಂಬೇ ಟಾಕೀಸಿನವರ
ಉ ಷ
ಶಾಂತ ಕುಮಾರ್ — ಸೋಹಕ
ಪವಿತ್ರವಹಿಸಿರುವ
ಅಮೋಘ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್
ಅಮೋಘ 2 ನೇ ವಾರ
ಒಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಕರ್ದಾರ್‌ರವರ
ದಾ ಸ್ತಾನ್
ಪಾತ್ರ: ಸುರೈಯ, ರಾಜಕಪೂರ್, ವೀಣ
ಸಂಗೀತ — ನೌಷದ್
ಪ್ರತಿ ದಿನ 3 ಪ್ರದರ್ಶನಗಳು

Announcement

Theatre building old materials and furniture are being sold very cheap. Apply to—

THE NEW OPERA TALKIES, MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ. ವಿಚಾರಿಸಿರಿ—

ನ್ಯೂ ಅಪೇರಾ ಟಾಕೀಸ್, ಮೈಸೂರು.

ಸಂಪುಟ ೯ ಸಂಚಿಕೆ ೨೩ ॥ ಶ್ರೀ ॥ ತಾ॥ 19-2-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃತ್ತಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ ವ. ಸ್ವ. ಸಂಘ

ಪಂಚಭೂತಗಳ ಸೃಷ್ಟಿಯೂ ಈಶ್ವರನೂ

(ಕರವಾಣಿ ಸ್ವಾಮಿಗಳು).

(ಮುಂದುವರಿದುದು)

ಉಪನಿಷತ್ತುಗಳಲ್ಲಿಯೂ ಈ ದೃಷ್ಟಾಂತ ಬರುತ್ತದೆ. ಹೇಗೆ ಗಂಜಿಯಲ್ಲಿ ಹೆಪ್ಪು ಗಟ್ಟಿದರೆ ಕಠಿಣವು ಬರುತ್ತದೆಯೋ, ಹಾಗೆಯೇ ನೀರಿನದ್ದೇ ಗಂಧಯುಕ್ತವಾದ ಘನೀಭಾವನೇ ಪೃಥ್ವಿ ; ಮೊಸರಿನಲ್ಲಿ ಮೇಲಿನ ಭಾಗವು ಕಠಿಣವಾಗಿಯೂ, ಕೆಳಗಿನ ಭಾಗವು ಕೋಮಲವೂ ದ್ರವೀಭೂತವಾಗಿಯೂ ಇರುವಂತೆಯೇ ಪೃಥಿವಿಯಿದ್ದೂ ಕೂಡ ಮೇಲಿನ ಅಂಶವು ಕಠೋರವಾಗಿಯೂ, ಕೆಳಗಿನ ಅಂಶವು ಮೃದು ಮತ್ತು ದ್ರವಯುಕ್ತವಾಗಿಯೂ ಇರುತ್ತದೆ ಇದರಿಂದ ' ಜಲದ್ದೇ ಪರಿಣಾಮವು ಪೃಥಿವಿ ' ಎಂಬುದು ತಿಳಿಯಬಹುದು ; ನೀರಿನಲ್ಲಿ ಗುರುತ್ವ ಅಥವಾ ಲಘುತ್ವ ತೆಳ್ಳ ಅಥವಾ ದಪ್ಪ ಇರುತ್ತದೆ : ಯಮುನೆಯ ನೀರು ಸ್ವಲ್ಪ ದಪ್ಪವಾಗಿಯೂ ಗಂಗೆಯ ನೀರು ತೆಳುವಾಗಿಯೂ ಇರುತ್ತದೆ ; ನೀರಿನಲ್ಲಿಯೂ ಗುರುತ್ವವಿರುವುದರಿಂದ ಅದು ಪೃಥಿವಿಯ ಆಶ್ರಿತವೆಂದೇ ತಿಳಿಯಬಹುದಾದರೂ ಕೂಡ ಮೋಡಗಳಲ್ಲಿ ಇರುವ ನೀರಿನ ಅಂಶವು ಎಷ್ಟು ಸೂಕ್ಷ್ಮವಿರುತ್ತದೆ? ವಾಯುವಿನ ಅಧಾರದಲ್ಲಿ ತಂತುರೂಪಗಳನ್ನು ತಾಣುತ್ತೇವೆ ಮತ್ತು ಸೂರ್ಯನ ಕಿರಣಗಳ ಅಧಾರದಲ್ಲಿ ನೀರಿನ ಆಕರ್ಷಣವಿರುತ್ತದೆ. ಇದೇ ದೃಷ್ಟಿಯಿಂದ ಶ್ರುತ್ಯುಕ್ತ ಕ್ರಮಾನುಸಾರವಾಗಿ ನೀರು, ತೇಜಸ್ಸಿನ ಆಧಾರದಲ್ಲಿ ಇದೆಯೆಂದೂ ಸಿದ್ಧವಾಗುತ್ತದೆ. ವಾಯುವಿನಲ್ಲಿ ತೇಜಸ್ಸು ಮಂದವಾಗಿರುವುದರಿಂದಲೂ, ವಾಯುವಿನ ಗುಣವಾದ ಸ್ಪರ್ಶವು ತೇಜಸ್ಸಿನಲ್ಲಿ ಅನುಸೂಚಿತವಾಗಿರುವುದರಿಂದಲೂ ತೇಜಸ್ಸು ವಾಯುವಿನ ಆಧಾರದಲ್ಲಿದೆ ಎಂದು ಒಪ್ಪಬಹುದು ಹೀಗೆಯೇ ಆಕಾಶವಿದ್ದರೇ ವಾಯುವಿನ ಚಲನೆಯಿರುವುದರಿಂದ ಮತ್ತು ಆಕಾಶದ ಗುಣವಾದ ಶಬ್ದವು ವಾಯುವಿನಲ್ಲಿ ಇರುವುದರಿಂದ ವಾಯುವಿಗೆ ಕಾರಣವೂ ಅಧಾರವೂ ಆಕಾಶವೆನ್ನುತ್ತೇವೆ. ಕಾರ್ಯಗಳಲ್ಲಿ ಕಾರಣದ ಕೆಲವು ಗುಣಗಳಿರುತ್ತವೆ. ಆದ್ದರಿಂದಲೇ ಆಕಾಶದ ಗುಣವಾದ ಶಬ್ದವು ವಾಯುವಿನಲ್ಲಿಯೂ ವಾಯುವಿನ ಗುಣವಾದ ಸ್ಪರ್ಶವೂ ತೇಜಸ್ಸಿನಲ್ಲಿಯೂ, ತೇಜಸ್ಸಿನ ಗುಣವಾದ ರೂಪವು ಜಲದಲ್ಲಿಯೂ, ಜಲದ ಗುಣವಾದ ರಸವು ಪೃಥಿವಿಯಲ್ಲಿಯೂ ಇರುತ್ತದೆ ಕಾರಣದ ಗುಣವು ಕಾರ್ಯದಲ್ಲಿ ಪ್ರವೇಶಿಸುತ್ತದೆಯೇ ಹೊರತು ಕಾರ್ಯದ ಗುಣವು ಕಾರಣದಲ್ಲಿ ಪ್ರವೇಶಿಸುವುದಿಲ್ಲ. ಆದ್ದರಿಂದಲೇ ಕಾರ್ಯದಲ್ಲಿ ಸ್ಥೂಲತೆಯೂ ಕಾರಣದಲ್ಲಿ ಸೂಕ್ಷ್ಮತೆಯೂ ಇರುತ್ತದೆ ಈ ಕಾರಣವಾಗಿಯೇ ಶಬ್ದಾದಿ ಪಂಚಗುಣಯುಕ್ತವಾದ ಪೃಥಿವಿಯು ಕಾರಣವಾಗಿಯೂ, ಗಂಧ ಗುಣವಿಲ್ಲದ್ದರಿಂದ ಸೂಕ್ಷ್ಮವಾದ ಜಲವು ಕಾರಣವಾಗಿಯೂ ಇದೆ ಹೇಗೆ ತೇಜವು ಶ್ರುತ್ಯುಕ್ತ ಆಕಾಶದಲ್ಲಿ ಸೂಕ್ಷ್ಮತೆಯೂ, ವ್ಯಾಪಕತೆಯೂ, ಕಾರಣತೆಯೂ ನಿರ್ದೇಶವಾಗಿದೆಯೋ, ಹಾಗೆಯೇ ಜಲದಲ್ಲಿಯೂ ಪೃಥಿವಿಗಿಂತ ವ್ಯಾಪಕತ್ವವೂ, ಸೂಕ್ಷ್ಮತ್ವವೂ, ಕಾರಣತ್ವವೂ ಇದೆ.

ಪೃಥಿವಿಯಲ್ಲಿ ಸ್ಥೌಲ್ಯ ಮತ್ತು ದಪ್ಪವಿದೆ; ಕಠೋರತೆ ಇದೆ ; ಹಾಗೆಯೆ ಜಲದಲ್ಲಿ ಸೂಕ್ಷ್ಮತೆ ಮತ್ತು ತೆಳುವಿದೆ. ಆಕಾಶದಲ್ಲಿ ಈ ಸೂಕ್ಷ್ಮತೆ ಇನ್ನೂ ಹೆಚ್ಚಿರುತ್ತದೆ. ಕೆಲವರು ಆಕಾಶವು ಕಾರಣವೆಂದೊಪ್ಪಲು ಇಚ್ಛಿಸುವುದಿಲ್ಲ : ಆದರೆ ಆಕಾಶವು ಕಾರಣವಲ್ಲದಿದ್ದಲ್ಲಿ ಅದರ ಗುಣವಾದ ಶಬ್ದವು ವಾಯು, ತೇಜ, ಜಲಾದಿಗಳಲ್ಲಿ ಹೇಗಿರಬಲ್ಲದು ? ಆದ್ದರಿಂದ ಆಕಾಶವು ವಾಯುವಿಗೆ ಕಾರಣವೆಂದು ಒಪ್ಪಬೇಕು. ಹೀಗೆ ಅನುಭವದಲ್ಲಿಯೂ ಕಂಡುಬರುತ್ತದೆ— ಅವಕಾಶವಿರುವಲ್ಲಿ ಗದ್ದಲ, ಮತ್ತದರಿಂದ ಉಷ್ಣತೆ, ಆದರಿಂದ ಬೆವರು, ಬೆವರಿನಿಂದ ಕೊಳೆ ಉಂಟಾಗುತ್ತದೆ ; ಅವಕಾಶವೇ ಆಕಾಶ ; ಈ ಅನುಭವ ರೀತಿಯಾಗಿ ಆಕಾಶದಿಂದ ವಾಯ್ವಾದಿ ರೀತಿಯು ಎಲ್ಲವೂ ಉತ್ಪತ್ತಿಯಾಗುತ್ತದೆ

ಶಬ್ದವು ಆಕಾಶದ ಗುಣವೇ ಅಲ್ಲ ; ಅದು ವಾಯುವಿನ ಕಾರ್ಯವೆಂದು ಕೆಲವರನ್ನುತ್ತಾರೆ ; ಅದು ಸರಿಯಿಲ್ಲ ; ಯಾಕೆಂದರೆ ವಾಯುವಿನ ಬೇರೆ ಗುಣಗಳು ತ್ವಗಿಂದ್ರಿಯದಿಂದ ಗ್ರಾಹ್ಯವಾಗುತ್ತಿರುವಂತೆ ಈ ಶಬ್ದವೂ ಅವು ಮತದಲ್ಲಿ ತ್ವಗಿಂದ್ರಿಯದಿಂದ ಗ್ರಾಹ್ಯವಾಗಬೇಕಾಗಿ ಬರುತ್ತದೆ. ಅನುಭವವು ಹಾಗಲ್ಲ : ಶಬ್ದವು ತ್ವಗಿಂದ್ರಿಯ ಗ್ರಾಹ್ಯವಲ್ಲ ; ಆಕಾಶವಾದ ಶ್ರೋತ್ರೇಂದ್ರಿಯದಿಂದ ಶಬ್ದವು ಗೃಹೀತವಾಗುತ್ತದೆ. ವಾಯುವಿನ ಎಲ್ಲ ಕಡೆಯಲ್ಲಿಯೂ ಗ್ರಾಹ್ಯ – ಗ್ರಾಹಕ ಭಾವವು ಸಜಾತೀಯದಲ್ಲಿಯೇ ಇರುತ್ತದೆ. ಪೃಥಿವಿಯು ಗಂಧವುಳ್ಳ ವಾರ್ಥವಾದ ಘ್ರಾಣೇಂದ್ರಿಯದಿಂದಲೂ, ತೇಜಸ್ಸಿನ ಗುಣವಾದ ರೂಪವುಳ್ಳ ತೇಜಸ್ಸಿನದಾದ ನೇತ್ರೇಂದ್ರಿಯದಿಂದಲೂ ಗ್ರಾಹ್ಯವಾಗುತ್ತದೆ. ಇದರಂತೆ ಆಕಾಶದವಾಗಿ ಶ್ರೋತ್ರೇಂದ್ರಿಯದಿಂದ ಗೃಹೀತವಾಗುವ ಶಬ್ದವೂ ಆಕಾಶದ್ದೇ ಗುಣವೆಂದು ಸ್ಪಷ್ಟವಾಗುತ್ತದೆ ; ಆದ್ದರಿಂದಲೇ ಶಬ್ದ ಸ್ಪರ್ಶ ರೂಪ ರಸ ಗಂಧ ಈ ಐದು ಗುಣಗಳು ಆಕಾಶ ವಾಯು ತೇಜ ಜಲ ಪೃಥಿವಿಗಳ ಅಸಾಧಾರಣ ಗುಣಗಳಾಗಿರುತ್ತವೆ ; ಮತ್ತು ಪಂಚಭೂತಗಳ ಪ್ರಾಣಗುಣಗಳನ್ನು ಅರಿಯುಲು ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣೇಂದ್ರಿಯಗಳು ಇವೆ.

ಸ್ಥೂಲಕ್ಕೆ ಸೂಕ್ಷ್ಮವೇ ಆಧಾರ ; ಸೂಕ್ಷ್ಮವಾದ ಜಲವು ಸ್ಥೂಲವಾದ ಪೃಥಿವಿಗೆ ಆಧಾರ ಸ್ಥೂಲವಾದ ಜಲಕ್ಕೆ ಸೂಕ್ಷ್ಮವಾದ ತೇಜವು ಆಧಾರ ; ಸ್ಥೂಲವಾದ ತೇಜಕ್ಕೆ ಆಧಾರ ಅದಕ್ಕಿಂತ ಸೂಕ್ಷ್ಮವಾದ ವಾಯು ; ವಾಯುವಿಗಿಂತಲೂ ಸೂಕ್ಷ್ಮವಾದ ಆಕಾಶವು ವಾಯುವಿಗೆ ಆಧಾರ. ಯಾವುದು ಎಷ್ಟು ಸೂಕ್ಷ್ಮವಾಗಿರುವುದೋ, ಅದಕ್ಕೆ ಅಷ್ಟೇ ಪ್ರಮಾಣವಾದ ಆಧಾರದ ಅಪೇಕ್ಷೆ ಇರುತ್ತದೆ. ಈ ಕಾರಣದಿಂದಲೇ ಸರ್ವಕ್ಕಿಂತಲೂ ಪರಮ ಸೂಕ್ಷ್ಮವೂ, ಸ್ವಪ್ರಕಾಶವೂ ಆದ ಪರಮತತ್ವಕ್ಕೆ ಯಾವ ಆಧಾರದ ಅಗತ್ಯವೂ ಇಲ್ಲ. ಕೊನೇ ಆಧಾರವಾದ ಈ ಪರಮತತ್ವದಲ್ಲಿ ಪೂರ್ಣ ಸ್ವಚ್ಛತೆಯೂ, ಸೂಕ್ಷ್ಮತೆಯೂ, ನಿರಾಧಾರತೆಯೂ, ನಿರ್ವಿಶೇಷತೆಯೂ ಸಿದ್ಧವಾಗುತ್ತದೆ.

[ಮುಂದುವರಿಯುವುದು

ಮದರಾಸು ರಿಲಿಜಸ್ ಎಂಡೋಮೆಂಟ್ ಮಸೂದೆಗೆ ಸಮ್ಮತಿಸಬೇಡಿ

[ಸ್ವಂ ಸು ಶ್ರುತಿ]

ಧೋಲ್ಕ : ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು ಮಾನ್ಯ ಭಾರತಾಧ್ಯಕ್ಷ ರಾಜೇಂದ್ರಬಾಬುಗಳವರಿಗೆ ತಂತಿ ಕಳುಹಿಸಿ, ಧಾರ್ಮಿಕ ಸ್ವಾತಂತ್ರ್ಯವನ್ನು ನಾಶ ಮಾಡಿರುವ ಮತ್ತು ಭಾರತ ರಾಜ್ಯಾಂಗಕ್ಕೆ ಅತಿಕ್ರಮವಿರುವ ಮದರಾಸು ಹಿಂದೂ ರಿಲಿಜಿಸ್ ಎಂಡೋಮೆಂಟ್ ಮಸೂದೆಗೆ ಸಮ್ಮತಿ ಕೊಡಬಾರದೆಂದು ಒತ್ತಾಯಪಡಿಸಿರುತ್ತಾರೆ

ಕೂಡಲೇ ಪ್ರತಿಯೊಬ್ಬರೂ ಟೆಲಿಗ್ರಾಂ ಮೂಲಕವೂ, ಕರಪತ್ರಗಳ ಮೂಲಕವೂ ರಾಜೇಂದ್ರಬಾಬುಗಳನ್ನು ಈ ಮಸೂದೆಗೆ ಸಮ್ಮತಿಯಿಲ್ಲವೆಂದು ವಿನಂತಿಸಬೇಕೆಂದೂ ಶ್ರೀ ಜಗದ್ಗುರುಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

Edited, Printed and Published by M. S. Krishna Rao. at the Satyavadi Press Chamrajpuram Mysore